**ಅಪರ ಹಿರಿಯ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ**

**ನ್ಯಾಯಾಲಯ, ಚಾಮರಾಜನಗರ.**

**ಸಿ.ಸಿ. ನಂ. 595/2021**

**ಚಾಸಾ– 7    ಫ್ರಾಸಾ– 4**

| | |
|---|---|
| ಸಾಕ್ಷಿದಾರರ ಹೆಸರು | : ದೊಡ್ಡಮಾದೇಗೌಡ |
| ತಂದೆಯ ಹೆಸರು | : ಕರಿಗೇಗೌಡ |
| ವಯಸ್ಸು | : 70 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ ಸ್ಥಳ | : ಬಡಗಲಪುರ |

ಸಾಕ್ಷಿಗೆ ದಿನಾಂಕಃ 03.10.2024 ರಂದು ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ

ಆರೋಪಿತರು ಮತ್ತು ಚಾಸಾ–1 ರಿಂದ 3 ನನಗೆ ಗೊತ್ತು.  ಚಾಸಾ–1 ಮತ್ತು 1ನೇ ಆರೋಪಿಯ ಮದುವೆ ವಿಚಾರ ನನಗೆ ಗೊತ್ತು.  ಆದರೆ ಮದುವೆ ಸಮಯದಲ್ಲಿ 1ನೇ ಆರೋಪಿಗೆ ಏನು ವರದಕ್ಷಿಣೆ ನೀಡಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ.  2–3 ವರ್ಷಗಳ ಹಿಂದೆ ಚಾಸಾ–1 ರವರು ಚಾಸಾ–2 ರವರ ಮನೆಯಲ್ಲಿ ಉಳಿದುಕೊಂಡಿದ್ದ ವಿಚಾರದಲ್ಲಿ ಪಂಚಾಯಿತಿ ಮಾಡುವಂತೆ ಚಾಸಾ–2 ರವರು ನನ್ನನ್ನು ಕರೆದಿದ್ದರು.  ಮಹಿಳಾ  ಪೊಲೀಸ್ ಠಾಣೆಯಲ್ಲಿ ಪಂಚಾಯಿತಿ ಆದಾಗ ಆರೋಪಿತರು ಚಾಸಾ–1 ರವರನ್ನು 2 ದಿನಗಳ ನಂತರ ಅವರ ಮನೆಗೆ ಕರೆದುಕೊಂಡು ಹೋಗುತ್ತೇವೆ ಎಂದು ಒಪ್ಪಿಕೊಂಡಿದ್ದರು.  ಆದರೆ ನಂತರದ

ದಿನಗಳಲ್ಲಿ ಆರೋಪಿತರು ಚಾಸಾ-1 ರವರನ್ನು ಅವರ ಮನೆಗೆ ಕರೆದುಕೊಂಡು ಹೋಗಿಲ್ಲ. ಈ ವಿಚಾರವನ್ನು ಹೊರತುಪಡಿಸಿ ನನಗೆ ಬೇರೆ ವಿಚಾರ ಗೊತ್ತಿಲ್ಲ. ಈ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

(ಮಾನ್ಯ ಎಪಿಪಿ ರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ. ರವರಿಂದಃ

ಆರೋಪಿತರು ಚಾಸಾ-1 ರವರಿಗೆ ತವರು ಮನೆಯಿಂದ 2 ಲಕ್ಷ ಹಣ ತರುವಂತೆ ಹಿಂಸೆ ನೀಡಿದ ವಿಚಾರದಲ್ಲಿ ಚಾಸಾ-2 ರವರು ಪಂಚಾಯಿತಿ ಮಾಡುವಂತೆ ಕರೆದಿದ್ದರು ಎಂದರೆ ಸರಿಯಲ್ಲ. ದಿನಾಂಕಃ 14.02.2021 ರಂದು ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ಗ್ರಾಮದ ಯಜಮಾನರುಗಳಾದ ಚಾಸಾ-4 ರಿಂದ 6 ರವರು ಗಂಗಮ್ಮತಾಯಿ ದೇವಸ್ಥಾನದ ಬಳಿ ಪಂಚಾಯಿತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ವರದಕ್ಷಿಣೆ ತೆಗೆದುಕೊಂಡು ಬರುವಂತೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದರು ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ.ಜೆ.ಎನ್. ವಕೀಲರಿಂದಃ

ನಮ್ಮ ಗ್ರಾಮದಲ್ಲಿ ಚಾಸಾ-4 ರವರು ಯಜಮಾನರಾಗಿದ್ದು ಪಂಚಾಯಿತಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿ 1 ರಿಂದ 3ನೇ ಆರೋಪಿತರು ಬೆಂಗಳೂರಿನಲ್ಲಿ

ವಾಸವಾಗಿದ್ದು, 4ನೇ ಆರೋಪಿ ನಮ್ಮ ಊರಿನಲ್ಲೇ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ನಾನು ನ್ಯಾಯಪಂಚಾಯಿತಿ ಮಾಡಿಲ್ಲ ಎಂದರೆ ಸರಿ. ನಾನು ಮಹಿಳಾ ಪೊಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನಗೆ ನೋಟಿಸ್ ನೀಡಿಲ್ಲ. ನಾನು ಪೊಲೀಸರ ಮುಂದೆ ನೀಡಿರುವ ಹೇಳಿಕೆಯು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಚಾಮರಾಜನಗರ.